2. ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತದ 2005–06ನೇ ಸಾಲಿನ 42ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ :– ಅಧ್ಯಕ್ಷರೇ ಶ್ರೀ ಬಿ. ಶ್ರೀರಾಮುಲು ಅವರ ಹೆಸರಿನ ಮುಂದಿರುವ ಕಾಗದಪತ್ರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ – ಗೈರು – ಅವರ ಪರವಾಗಿ

ಶ್ರೀ ಎಂ.ಪಿ. ಪ್ರಕಾಶ್ :– ಅಧ್ಯಕ್ಷರೇ, ಶ್ರೀ ಹೆಚ್.ಕೆ. ಕುಮಾರಸ್ವಾಮಿಯವರ ಹೆಸರಿನ ಮುಂದಿರುವ ಕಾಗದಪತ್ರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು :– ಮುಂದಿಡಲಾಯಿತು.

2. ಅರ್ಜಿಗಳನ್ನೊಪ್ಪಿಸುವುದು.

ಅಧ್ಯಕ್ಷರು :– ಶ್ರೀ ಹೆಚ್.ಡಿ. ಬಸವರಾಜು ಅವರ ಹೆಸರಿನ ಮುಂದಿರುವ ಅರ್ಜಿಯನ್ನು ಶ್ರೀಯುತರು ಗೈರು ಇರುವುದರಿಂದ ಅವರ ಪರವಾಗಿ ಸಭೆಯ ಮುಂದೆ ಒಪ್ಪಿಸಲಾಗಿದೆ.

3. ನಿಲುವಳಿ ಸೂಚನೆಗೆ ಅನುಮತಿ ಕೋರಿ ಚರ್ಚೆ

ವಿಷಯ :– ರಾಜ್ಯದಲ್ಲಿ ಬರಗಾಲ ಉಂಟಾಗಿರುವ ಬಗ್ಗೆ ಮತ್ತು ಕಬ್ಬು ಬೆಳೆದ ರೈತರು ಕಷ್ಟದಲ್ಲಿರುವ ಬಗ್ಗೆ.

ಶ್ರೀ ಧರಂ ಸಿಂಗ್ (ವಿರೋಧ ಪಕ್ಷದ ನಾಯಕರು) :– ಅಧ್ಯಕ್ಷರೇ ಮೇಲ್ಮನೆ ಸಹ ನಡೆದಿದೆ. ಒಂದು ವೇಳೆ ಯಾವುದೇ ಸಚಿವರು ಬೇರೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೆ ಅವರ ಪರವಾಗಿ ಕಾಗದಪತ್ರವನ್ನು ಬೇರೆಯವರು ಮಂಡಿಸಬಹುದು. ಬೀದರ್‌ನಲ್ಲಿ ವಿಕಾಸಯಾತ್ರೆ ಏನಿದೆ ಅಲ್ಲಿಗೆ ಎಲ್ಲಾ ಸಚಿವರ ದಂಡು ದಂಡೆ ಹೋಗಿದೆ. ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಉಪ ಮುಖ್ಯಮಂತ್ರಿ ಯಡಿಯೂರಪ್ಪನವರೂ ಅಲ್ಲಿದ್ದಾರೆ. ತಮ್ಮೆನುರಿಗೇ ಸಭೆಯಾಗಿದೆ, ಅವರು ಏನು ಹೇಳಿದ್ದರು, 9, 10 ನಮಗೆ ರಜೆ ಕೊಡಬೇಕು, ರಾಜನಾಥಸಿಂಗ್ ಬರುತ್ತಾರೆ, ನಾನೂ ಸಭೆಯಲ್ಲಿ ಪಾಲ್ಗೊಳ್ಳಬೇಕು ಅಂತ. ಎಲ್ಲಾ ಪಕ್ಷಗಳ ಸದಸ್ಯರೂ ಸಚಿವರಿದ್ದಾಗ ಏನೋ ಒಂದೆರಡು ದಿವಸ ಅವರ ಕಾರ್ಯಕ್ರಮವಿದ್ದಾಗ ಹೋಗುತ್ತಾರೆ. ಇವತ್ತು ಬೀದರ್ ಬೇರೆ ಕಡೆಯಲ್ಲಾ ಹೇಳಿಕೆ ಕೊಡುತ್ತಿದ್ದಾರೆ. ವಿಕಾಸಯಾತ್ರೆ ಹೋಗುತ್ತಿದೆ. ಅಲ್ಲಿ ನನ್ನ ತಾಲ್ಲೂಕಿನಲ್ಲಿ